# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
# ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
## ವಾರ್ಡ್‌ಸಮಿತಿ ಸಭೆ, ದಿನಾಂಕ: 07-06-2021ರ
## ಸಭಾ ನಡುವಳಿ

**ದಿನಾಂಕ: 07-06-2021ರಂದು ಬೆಳ್ಳಿಗೆ 11.00 ಗಂಟೆಗೆ** ವಾರ್ಡ್ ನಂ.06 ಥಣಿಸಂದ್ರ ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಗಳಾದ ಶ್ರೀ ಬಿ.ಎಸ್. ಶ್ರೀಧರ ರವರ ಅಧ್ಯಕ್ಷತೆಯಲ್ಲಿ ಹೆಗಡೆನಗರ, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಬಿಬಿಎಂಪಿ ಸಮುದಾಯಭನವದಲ್ಲಿ ನೆಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ.ಎಸ್. ಶ್ರೀಧರ | ನೋಡಲ್ ಅಧಿಕಾರಿಗಳು ವಾರ್ಡ್ ನಂ 06(ಥಣಿಸಂದ್ರ) ಹಾಗೂ ಸ.ಕಾ.ಅ ವ್ಯಾಟರಾಯನಪುರ ಉಪ ವಿಭಾಗ |
| 2 | ಶ್ರೀ ಸುರೇಶ ದೇವತರಾಜ್ | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ, ವಾರ್ಡ್ ಸಮಿತಿ, ವಾರ್ಡ್ ನಂ 06(ಥಣಿಸಂದ್ರ) |
| 3 | ಶ್ರೀ ಡಾ॥ ರಾವುಲ್ | ವೈದ್ಯಾಧಿಕರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ, ಹೆಗಡೆನಗರ |
| 4 | ಶ್ರೀ ವೆಂಕಟೇಶ್ | ಕಂದಾಯ ನೀರಿಕ್ಷಕರು, ಥಣಿಸಂದ್ರ |
| 5 | ಶ್ರೀ ಶಶಿಧರ್ | ಕಂದಾಯ ನೀರಿಕ್ಷಕರು, ಥಣಿಸಂದ್ರ |
| 6 | ಶ್ರೀ ಪ್ರೇಮಕುಮಾರ್ | ಹಿರಿಯಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 06 (ಥಣಿಸಂದ್ರ) |
| 7 | ಶ್ರೀ ಗುರುಪ್ರಸನ್ನ | ಕಿರಿಯಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 06 (ಥಣಿಸಂದ್ರ) |
| 8 | ಶ್ರೀ ರಾಜೇಶ್ | ಕಂದಾಯ ನಿರೀಕ್ಷಕರು, ಥಣಿಸಂದ್ರ |

**ಶ್ರೀ ಸುರೇಶದೇವತರಾಜ್:** ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂಯರರು, ವಾರ್ಡ್ ನಂ 06 ರವರು ಸಭೆಗೆಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯದ ಬಗ್ಗೆ ತಿಳಿಸಿದರು.

1. **ಕೋವಿಡ್ -19 ರ ಸಂಬಂಧ ಸೊಂಕು ಹರಡವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮಂಜಾಗ್ರತ ಕ್ರಮಗಳ ಬಗ್ಗೆ.** ಶ್ರೀ ಡಾ॥ ರಾವುಲ್ ವೈಧ್ಯಾಧಿಕಾರಿಗಳು, ಹೆಗಡೆನಗರ ಪ್ರಾಥಮಿಕ ಆರೋಗ್ಯ ಕೇಂದ್ರರವರು ಮಾತನಾಡಿ ಕೋವಿಡ್-19 ಸೊಂಕು ಹರಡದಂತೆ ತಡೆಗಟ್ಟಲು ಆರೋಗ್ಯ ಇಲಾಖೆ, ಇಂಜಿನಿಯರಿಂಗ್ ರೆವಿನ್ಯೂ, ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು ರವರುಗಳಿಗೆ ಟೆಸ್ಟಿಂಗ್ ಆಗಿ ಗುರಿಯನ್ನು ನಿಗಧಿಪಡಿಸಿದ್ದು, ಅದರಂತೆ ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ದಿನ ವಿವಿಧ ಬಡಾವಣೆ/ ಅಪಾರ್ಟ್‌ಮೆಂಟ್/ ಸ್ಥಳಗಳಲ್ಲಿ ಟೆಸ್ಟಿಂಗ್ ಮಾಡಲಾಗುತ್ತಿದೆ. ಹಾಗೂ 18 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಕರಿಗೆ ಮುಂಚೂಣಿ ಕೆಲಸಗಾರರಿಗೆ ಮತ್ತು 45 ವರ್ಷಕ್ಕಿಂತ ಮೇಲ್ಪಟ್ಟ ನಾಗರೀಕರಿಗೆ ಕೋವಿಡ್ ಲಸಿಕೆಯನ್ನು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಶಾಲೆ, ವಿವಿಧ ಸ್ಥಳಗಳಲ್ಲಿ ಲಸಿಕೆ ಹಾಕುವ ಕಾರ್ಯಕ್ರಮ ಸಹ ನಡೆಯುತ್ತಿರುವುದಾಗಿ

ತಿಳಿಸಿದರು. ಮಾನ್ಯ ಶಾಸಕರು, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ರವರು ಲಸಿಕೆ ಹಾಕಿಸಿಕೊಳ್ಳುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳಿಂದ ಹೆಚ್ಚಿನ ಸಾರ್ವಜನಿಕರು ಲಸಿಕೆ ಹಾಕಿಸಿಕೊಳ್ಳಲು ಮುಂದೆ ಬರುತ್ತಿರುವುದಾಗಿ ತಿಳಿಸಿದರು.

2. **ಅಶ್ವಥನಗರ 1ನೇ ಕ್ರಾಸ್ ನಿವಾಸಿಗಳು :** ಅಶ್ವಥನಗರ 1ನೇ ಅಡ್ಡರಸ್ತೆ, ಮಮತ ಸ್ಕ್ಯಾನಿಂಗ್ ಸೆಂಟರ್ ರಸ್ತೆ ನಿವಾಸಿಗಳ ಪರವಾಗಿ ಮನವಿ ಸಲ್ಲಿಸಿ ಸದರಿ ರಸ್ತೆಯಲ್ಲಿ ಒಳಚರಂಡಿ ಕಾಮಗಾರಿ ಅಪೂರ್ಣವಾಗಿರುತ್ತದೆ ಎಂದು, ಕುಡಿಯುವ ನೀರಿನ ವ್ಯವಸ್ಥೆಯ ಹಾಗೂ ರಸ್ತೆ ಸಂಪೂರ್ಣವಾಗಿ ಹಾಳಾಗಿರುವುದರಿಂದ ತುರ್ತಾಗಿ ರಸ್ತೆಯನ್ನು ಅಭಿವೃದ್ಧಿಪಡಿಸಬೇಕಾಗಿ ಕೋರಿದರು.

3. **ಶ್ರೀ ದಾಸಪ್ಪ, ಹೆಗಡೆನಗರ ನಿವಾಸಿ:** ಹೆಗಡೆನಗರ ವೃತ್ತದ ಹತ್ತಿರ ಇರುವ ಕೊಳವೆ ಬಾವಿಯ ನಿರ್ವಹಣೆಯನ್ನು ನೀರು ಸರಬರಾಜುದಾರರು ಮಾಡುತ್ತಿರುವುದಿಲ್ಲ. ಹಾಗೂ ಈ ಕೊಳವೆಬಾವಿಯನ್ನು ಅಲ್ಲಿನ ಸಾರ್ವಜನಿಕರು ಸ್ವತಃ ಸ್ವಿಚ್ ಆನ್ & ಆಫ್ ಮಾಡುತ್ತಿರುವುದು ಕಂಡು ಬಂದಿರುತ್ತದೆ ಎಂದು ಸಭೆಗೆ ತಿಳಿಸಿದರು. ಸದರಿ ವಿಷಯದ ಬಗ್ಗೆ ಸ.ಅ ರವರು ಮಾತನಾಡಿ ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು. ಹಾಗೂ ಈ ಸಭೆಗೆ ಹೆಚ್ಚಿನ ಅಧಿಕಾರಿಗಳು ಗೈರು ಹಾಜರಿಯಾಗಿರುವುದರಿಂದ ಸಾರ್ವಜನಿಕರ ಅಹವಾಲುಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಲು ಸಾಧ್ಯವಾಗುತ್ತಿರುವುದಿಲ್ಲವೆಂದು ತಿಳಿಸಿದರು.

4. **ಶ್ರೀ ಸುರೇಶ್ ದೇವತರಾಜ್, ಸ.ಅ ರವರು ಮಾತನಾಡಿ:** ಲಾಕ್‌ಡೌನ್ ಇರುವುದರಿಂದ ಕೂಲಿ ಕಾರ್ಮಿಕರ ಸಮಸ್ಯೆ ಇದ್ದು, ಇದರಿಂದಾಗಿ ಸಿವಿಲ್ ಕಾಮಗಾರಿಗಳು ಸ್ಥಗಿತಗೊಂಡಿರುತ್ತದೆ ಎಂದು ಹಾಗೂ ಕೂಲಿಕಾರ್ಮಿಕರು ಲಭ್ಯವಾದ ತಕ್ಷಣ ಈಗಾಗಲೇ ಮಂಜೂರಾಗಿರುವ ಹಾಗೂ ಸ್ಥಗಿತಗೊಂಡಿರುವ ಕಾಮಗಾರಿಗಳನ್ನು ಪ್ರಾರಂಭಿಸಿ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಅಭಾವವಿರುವ ಪ್ರದೇಶಗಳಲ್ಲಿ ಬಿಬಿಎಂಪಿ ವತಿಯಿಂದ ಎರಡು ಟ್ಯಾಂಕರ್‌ಗಳ ಮುಖಾಂತರ ನೀರು ಸರಬರಾಜು ಮಾಡುತ್ತಿರುವುದಾಗಿ ಸಭೆಗೆ ತಿಳಿಸಿದರು.

5. **ಶ್ರೀ ಮಂಜುನಾಥ ಕಿರಿಯ ಆರೋಗ್ಯ ನಿರೀಕ್ಷಕರು:** ಸದರಿಯವರು ಮಾತನಾಡಿ ವಾರ್ಡ್ ನಂ 06 ರಲ್ಲಿ ಪ್ರತಿ ದಿನ 4 ಕಾಂಪ್ಯಾಂಕ್ಟರ್‌ಗಳು ತ್ಯಾಜ್ಯವನ್ನು ಸಾಗಿಸಲು ಉಪಯೋಗಿಸಲಾಗುತ್ತಿದೆ ಎಂದು ಹಾಗೂ ಪ್ರತಿ ದಿನ ಸುಮಾರು 7.00 ಟನ್ ಹಸಿ ತ್ಯಾಜ್ಯ ಸಂಗ್ರಹವಾಗುತ್ತಿರುವುದಾಗಿ ತಿಳಿಸಿದರು. ನೋಡಲ್ ಅಧಿಕಾರಿಗಳು ಮಾತನಾಡಿ ಹಸಿ ತ್ಯಾಜ್ಯದಪ್ರಮಾಣ ಬಹಳ ಕಡಿಮೆಯಾಗಿರುವುದರಿಂದ ವಾರ್ಡ್ ವ್ಯಾಪ್ತಿಯಲ್ಲಿ ಇನ್ನೂ ಹೆಚ್ಚಿನ ಹಸಿ ತ್ಯಾಜ್ಯ ಬರುವಂತೆ ಅಗತ್ಯ ಕ್ರಮವಹಿಸಲು ಸೂಚಿಸಿದರು. ಒಣ ತ್ಯಾಜ್ಯ ಸಂಗ್ರಹಕ್ಕೆ ಉಪಯೋಗಿಸುತ್ತಿರುವ ವಾಹನಗಳು ಚಿಕ್ಕದಾದಿದ್ದು, ಕೆಲವು ಮನೆಗಳಿಂದ ಒಣತ್ಯಾಜ್ಯ ಸಂಗ್ರಹಿಸಿದಾಗ ಬಹಳ ಬೇಗ ತುಂಬು ಹೊಗುತ್ತಿದ್ದು, ಎರಡನೇಯ ಟ್ರೀಪ್‌ಗೆ ಆಟೋ ಟಿಪ್ಪರ್ ಗಳು ಒಣ ತ್ಯಾಜ್ಯ ಸಂಗ್ರಹಿಸಲು ಬರುತ್ತಿರುವುದಿಲ್ಲ ಎಂದು ಸಾರ್ವಜನಿಕರು ಸಭೆಗೆ ತಿಳಿಸಿದರು ಹಾಗೂ ಆಟೋ ಟಿಪ್ಪರ್‌ಗಳು ಕಡ್ಡಯವಾಗಿ ಮೈಕ್ ಅಳವಡಿಸಲು ಕೋರಿದರು. ಈ ಸಂಬಂದ ಅಗತ್ಯ ಕ್ರಮ ವಹಿಸಲು ನೂಡಲ್ ಅಧಿಕಾರಿಯವರು ಕಿರಿಯ ಆರೋಗ್ಯ ನಿರೀಕ್ಷಕರು ರವರಿಗೆ ಸೂಚಿಸಿದರು.

ಕೊನೆಯದಾಗಿ ಮಾನ್ಯನೋಡಲ್ ಅಧಿಕಾರಿಗಳು, ವಾರ್ಡ್ ಸಮಿತಿರವರು ಮಾತನಾಡಿ ಈವರೆಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರೀಗಣಿಸಿ ಎಲ್ಲಾದೂರು ಮತ್ತು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಗತ್ಯಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳಿಗೆ ಹಾಗೂ ವಿವಿಧ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಹಾಜರಾಗಿರುವ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

07.06.2021

ಕಾರ್ಯದರ್ಶಿ
ಹಾಗೂ ಸಹಾಯಕಅಭಿಯಂತರರು
ವಾರ್ಡ್ ನಂ. 06, (ಥಣಿಸಂದ್ರ)

ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.